# ನವಿಲುಗನ್ನಡಿ

- ಅಕ್ಟೋಬರ್ ಸಂಚಿಕೆ ಸಮೃದ್ಧವಾಗಿತ್ತು. ಗುರುಲಿಂಗ ಕಾಪಸೆ ಅವರ ಸಂದರ್ಶನ 'ನನ್ನದು ಗಾಂಧೀ ಪಥ' (ಸಂ: ಬಸವರಾಜ ಸಾದರ) ಸೊಗಸಾಗಿತ್ತು. 'ಗಾಂಧೀ ಸ್ಮರಣೆ' ಅರ್ಥಪೂರ್ಣ ಸಂಪಾದಕೀಯ.

  **ಎಂ.ಜಿ. ಸಿದ್ದರಾಮಯ್ಯ, ತುಮಕೂರು**

- ಗುರುಲಿಂಗ ಕಾಪಸೆ ಅವರ ಸಂದರ್ಶನ 'ನನ್ನದು ಗಾಂಧೀ ಪಥ' ಮಾರ್ಮಿಕವಾಗಿದೆ.

  **ಬಿ.ಎನ್. ಸೊಲ್ಲಾಪುರ, ಔರಾದ,**
  **ಡಾ. ಎಸ್.ಕೆ. ಕೊಪ್ಪಾ, ಇಂಡಿ**

- 'ದರ್ಶನ ಕಾವ್ಯ' ಎಂಬುದನ್ನು ಕೇಳಿದ್ದೇವೆ. ಗುರುಲಿಂಗ ಕಾಪಸೆ ಅವರೊಂದಿಗಿನ ಈ ಮಾತುಕತೆಯನ್ನು 'ದರ್ಶನ ಸಂದರ್ಶನ' ಎನ್ನಬಹುದು.

  **ಚಂದ್ರಶೇಖರ ವಸ್ತ್ರದ, ಗದಗ, ವಿಜಯಕಾಂತ ಪಾಟೀಲ, ಹಾನಗಲ್ಲ**

- ಸಾರ್ಥಕ ಬದುಕಿನ ಸಾಧಕರ ವಿಚಾರಗಳನ್ನು ಚರ್ಚಿಸಿ, ಜನಮನಕ್ಕೆ ಮುಟ್ಟಿಸುವ 'ಮಾತು–ಕತೆ' ಶ್ಲಾಘನಾರ್ಹ.


  **ಪ್ರೊ. ಜಿ.ವಿ. ಚಿಕ್ಕಮಠ, ಹುಬ್ಬಳ್ಳಿ**

- 'ಗಾಂಧೀ–150 ವಿಶೇಷ' ಸಂಚಿಕೆ ಅರ್ಥಪೂರ್ಣ. ಸಮಕಾಲೀನ ಸಂಗತಿಗಳಿಗೆ 'ಮಯೂರ' ಸ್ಪಂದಿಸುವ ಪರಿ ಮೆಚ್ಚುವಂಥದ್ದು.

  **ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**

- 'ಮತ್ತೆ ಮತ್ತೆ ಹುಟ್ಟುವ ಗಾಂಧೀ ಹಾದಿಗಳು' (ನಟರಾಜ್ ಹುಳಿಯಾರ್) ಮತ್ತು 'ನಿರಂತರ ಚಲನಶೀಲತೆ' (ಸಂವರ್ತ 'ಸಾಹಿಲ್') ಲೇಖನಗಳು ಗಮನ ಸೆಳೆದವು.

  **ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**




- ಈ ಬಾರಿಯ ಚಿತ್ತಪಟದ ಲೇಖನ 'ನಿದ್ದಿ ಮಾಡೊ ದೇವರಂಥ ಗಾಂಧಿ' (ರಘುನಾಥ ಚ.ಹ.) ವಿಭಿನ್ನ ನಿರೂಪಣೆಯಿಂದ ಕೂಡಿತ್ತು.

  **ರಾಜಲಕ್ಷ್ಮೀ, ಮೈಸೂರು**

- 'ಮೂಸ ಮತ್ತು ಮರ' (ಗೋಪಾಲಕೃಷ್ಣ ಪೈ), 'ನಾನೇ ಗಾಂಧಿ' (ಕೇಶವರೆಡ್ಡಿ ಹಂದ್ರಾಳ), 'ದೀರ್ಘಾಯುಸ್ಸು' (ಕುಮುದಾ ಪುರುಷೋತ್ತಮ್), 'ದಾಟಲಾರದವರು' (ಉಷಾ ನರಸಿಂಹನ್) ಈ ಸಂಚಿಕೆಯ ಉತ್ತಮ ಕತೆಗಳು.

  **ಸಂಧ್ಯಾ ಭಟ್, ಶ್ರುತಿ ಭಟ್, ಮುಂಬಯಿ**

- ನವಿರಾದ ಹಾಸ್ಯ, ವಿಡಂಬನೆ, ವಾಸ್ತವದಿಂದ ಕೂಡಿದ ಕೆ.ವಿ. ತಿರುಮಲೇಶ್ ಅವರ ಅತಿ ಸಣ್ಣಕತೆಗಳು ಒಂದಕ್ಕಿಂತ ಒಂದು ವಿಭಿನ್ನ. 'ಸ್ಮೃತಿಬಿಂಬ' ಛಾಯಾಂಕಣ ಒಂದು ಅಪರೂಪದ ಪ್ರಯತ್ನ. ಸಂಗ್ರಹಯೋಗ್ಯ.

  **ಸುಂದರ್, ಬೆಂಗಳೂರು**

- ಕೆ.ವಿ. ತಿರುಮಲೇಶ್ ಅವರ ಅತಿ ಸಣ್ಣಕತೆಗಳು ಮನಸ್ಸಿಗೆ ಮುದ ನೀಡಿದವು.

  **ಕೆ. ಸಿದ್ಧನಗೌಡ, ಉಜ್ಜೆಯಿನಿ**